## ಕರ್ನಾಟಕ ವಿಧಾನ ಪರಿಷತ್ತು

**ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಕಿಶೋರ್ ಕುಮಾರ್ ಪುತ್ತೂರು ಇವರು ಶೂನ್ಯ ವೇಳೆಯಲ್ಲಿ ಪ್ರಸ್ತಾಪಕ್ಕೆ ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಸಚಿವರ ಉತ್ತರ.**

***

**ವಿಷಯ:-** ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯು ಗ್ರಾಮ ಪಂಚಾಯತ್ ವ್ಯಾಪ್ತಿಯಲ್ಲಿರುವ ನಿವೇಶನ ಮತ್ತು ಕಟ್ಟಡಗಳಿಗೆ ಆನ್ಲೈನ್ ಮೂಲಕ ಖಾತಾಪತ್ರ ವಿತರಿಸಲು 'ಇ ಸ್ವತ್ತು' ತಂತ್ರಾಂಶವನ್ನು ಅಭಿವೃದ್ಧಿಪಡಿಸಿದ್ದು ಇತ್ತೀಚಿನವರೆಗೆ ಚಾಲ್ತಿಯಲ್ಲಿ ತಂತ್ರಾಂಶವನ್ನು ಪರಿಷ್ಕರಿಸಿ ಹೊಸದಾಗಿ ಇ - ಸ್ವತ್ತು 2.0 ಪರಿಚಯಿಸಿದ್ದು ಸದರಿ ತಂತ್ರಾಂಶದ ಮೂಲಕ ಸಾರ್ವಜನಿಕರ ಸ್ವತ್ತಿಗೆ ಖಾತಾ ಪ್ರಮಾಣ ಪತ್ರ ವಿತರಿಸಲು ದಿನಾಂಕ 01.12.2025 ರಿಂದ ಈ ಸ್ವತ್ತು ಅಭಿಯಾನ ಎಂಬುದಾಗಿ ರಾಜ್ಯ ಸರ್ಕಾರ ಚಾಲನೆಗೊಳಿಸಿರುತ್ತದೆ ಆದರೆ ಸದರಿ ಹೊಸ ತಂತ್ರಾಂಶದಲ್ಲಿ ಹಲವಾರು ಲೋಪದೋಷಗಳಿದ್ದು ಅಭಿಯಾನ ಪ್ರಾರಂಭವಾಗಿ 10 ದಿವಸ ಕಳೆದಿದ್ದರೂ ರಾಜ್ಯದ 5951 ಗ್ರಾಮ ಪಂಚಾಯತಿಗಳಲ್ಲಿ ಈವರೆಗೂ ಒಂದೇ ಒಂದು ಖಾತಾ ಪ್ರಮಾಣ ಪತ್ರವನ್ನು ಸೃಜಿಸಲಾಗಿಲ್ಲ.ಈ ಹಿಂದಿನ ತಂತ್ರಾಂಶದಲ್ಲಿ ಕೇಂದ್ರ ಮತ್ತು ರಾಜ್ಯ ಸರ್ಕಾರದ ವಿವಿಧ ವಸತಿ ಯೋಜನೆಯಡಿ ಮನೆ ನಿರ್ಮಿಸಿದ ಫಲಾನುಭವಿಗಳಿಗೆ ಕದ ನಂಬ್ರ ವಿತರಿಸಲು ಅವಕಾಶವಿದ್ದು ಪ್ರಸ್ತುತ ತಂತ್ರಾಂಶದಲ್ಲಿ ಸದರಿ ಅವಕಾಶವನ್ನು ತೆಗೆದು ಹಾಕಲಾಗಿದೆ. ಈಗಾಗಲೇ ಸೃಜಿಸಲಾಗಿರುವ ನಮೂನೆ 11-B ಯನ್ನು 11-A ಗೆ ಪರಿವರ್ತಸಲು ಅವಕಾಶ ಇಲ್ಲವಾಗಿದೆ. ಈ ಹಿಂದೆ ನಮೂನೆ 9 & 11 -A ಇದ್ದು ಪ್ರಸ್ತುತ ಕೇವಲ 11-A ಖಾತಾಪತ್ರವನ್ನು ಸಾರ್ವಜನಿಕರಿಗೆ ವಿತರಿಸಲಾಗುತ್ತಿದ್ದು ನಮೂನೆ 9 ನ್ನು ಕೈಬಿಟ್ಟಿರುವ ಬಗ್ಗೆ ಸಾರ್ವಜನಿಕರಿಗೆ ಯಾವುದೇ ಮಾಹಿತಿಯನ್ನು ನೀಡಿರುವುದಿಲ್ಲ. ಗ್ರಾಮ ಪಂಚಾಯತಿಯ ಅಧ್ಯಕ್ಷರಿಗೆ ಲಾಗಿನ್ ನೀಡಲಾಗಿದ್ದು ಯಾವುದೇ ಸೂಕ್ತ ತರಬೇತಿ ನೀಡಿರುವುದಿಲ್ಲ, ಈ ಹಿಂದೆ ಪಂಚಾಯತ್ ಅಭಿವೃದ್ಧಿ ಅಧಿಕಾರಿ ಹಂತದಲ್ಲಿ ಅನುಮೋದನೆ ಆಗುತ್ತಿದ್ದ ಪ್ರಕ್ರಿಯೆಯನ್ನು ಹೊಸ ತಂತ್ರಾಂಶದಲ್ಲಿ ತಾಲೂಕು ಪಂಚಾಯಿತಿಯ ಕಾರ್ಯನಿರ್ವಾಹಕ ಅಧಿಕಾರಿಯವರೆಗೆ ಕೊಂಡೊಯ್ಯಲಾಗಿದೆ. ಭಾರತದ ಸಂವಿಧಾನದ ಆಶಯದಂತೆ ಅಧಿಕಾರ ವಿಕೇಂದ್ರೀಕರಣದ ಭಾಗವಾಗಿ ರಚನೆಯಾದ ಗ್ರಾಮ ಪಂಚಾಯತಿಗಳು ಗ್ರಾಮೀಣ ಜನರಿಗೆ ಎಲ್ಲಾ ಸೇವೆಗಳನ್ನು ಒದಗಿಸುವ ಮುಂಚೂಣಿ ಕಾರ್ಯಾಲಯವಾಗಿದೆ ಆದರೆ ಪ್ರಸ್ತುತ ಸರ್ಕಾರಗಳ ನೀತಿಗಳಿಂದಾಗಿ ಗ್ರಾಮೀಣ ಭಾಗದ ಜನರು ತಮ್ಮ ಹಲವಾರು ಸೇವೆಗಳಿಗಾಗಿ ನಗರ, ತಾಲೂಕು ಮತ್ತು ಜಿಲ್ಲಾ ಕೇಂದ್ರಗಳಿಗೆ ಅಲೆಯಬೇಕಾದ ಪರಿಸ್ಥಿತಿ ನಿರ್ಮಾಣವಾಗಿದೆ. ಗ್ರಾಮೀಣ ಭಾಗದ ಅಭಿವೃದ್ಧಿಗಾಗಿ ನಿಯಮಗಳನ್ನು ರೂಪಿಸುವಾಗ ಗ್ರಾಮೀಣ ಭಾಗದ ಜನ ಪ್ರತಿನಿಧಿಗಳನ್ನು ವಿಶ್ವಾಸಕ್ಕೆ ತೆಗೆದುಕೊಂಡಲ್ಲಿ ಇಂತಹ ಹಲವಾರು ಗೊಂದಲಗಳಿಗೆ ಆಸ್ಪದ ಇರುವುದಿಲ್ಲ. ಪ್ರಸ್ತುತ ಪರಿಚಯಿಸಲಾಗಿರುವ ಇ- ಸ್ವತ್ತು 2.0 ತಂತ್ರಾಂಶದ ಲೋಪದೋಷಗಳನ್ನು ಆದಷ್ಟು ಶೀಘ್ರವಾಗಿ ಪರಿಹರಿಸಿ ಗ್ರಾಮೀಣ ಜನರಿಗೆ ಸುಸೂತ್ರವಾಗಿ ಸೇವೆ ಸಿಗುವಂತಾಗಲು ಆದಷ್ಟು ಶೀಘ್ರವಾಗಿ ಕ್ರಮ ವಹಿಸುವ ಬಗ್ಗೆ.

****

**ಉತ್ತರ:** ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ (ತಿದ್ದುಪಡಿ) ಅಧಿನಿಯಮ, 2025 ಅನ್ನು ದಿನಾಂಕ: 07.04.2025 ರಂದು ಅಧಿಸೂಚಿಸಲಾಗಿದ್ದು, ಅದರಂತೆ ಅಧಿನಿಯಮಕ್ಕೆ ಪ್ರಕರಣ 199 (ಬಿ) ಹಾಗೂ 199 (ಸಿ) ಅನ್ನು ಸೇರ್ಪಡೆ ಮಾಡಲಾಗಿರುತ್ತದೆ.

ತಿದ್ದುಪಡಿ ಅಧಿನಿಯಮದನ್ವಯ ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ (ಗ್ರಾಮ ಪಂಚಾಯಿತಿಗಳ ತೆರಿಗೆ, ದರ ಮತ್ತು ಶುಲ್ಕಗಳು) ನಿಯಮಗಳು, 2025 ನ್ನು ದಿನಾಂಕ: 17.10.2025 ರಂದು ಅಧಿಸೂಚಿಸಲಾಗಿರುತ್ತದೆ.

ಮೇಲ್ಕಂಡ ನಿಯಮಗಳನ್ವಯ ಇ-ಸ್ವತ್ತು 2.0 ತಂತ್ರಾಂಶವನ್ನು ದಿನಾಂಕ:01.12.2025 ರಂದು ಸರ್ಕಾರದ ಮಾನ್ಯ ಮುಖ್ಯ ಮಂತ್ರಿಗಳು, ಮಾನ್ಯ ಉಪ ಮುಖ್ಯಮಂತ್ರಿಗಳು ಹಾಗೂ ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಸಚಿವರಿಂದ ಚಾಲನೆಗೊಳಿಸಲಾಗಿರುತ್ತದೆ.

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| 1 | ಅಭಿಯಾನ ಪ್ರಾರಂಭವಾಗಿ 10 ದಿವಸ ಕಳೆದಿದ್ದರೂ ರಾಜ್ಯದ 5951 ಗ್ರಾಮ ಪಂಚಾಯಿತಿಗಳಲ್ಲಿ ಈವರೆಗೂ ಒಂದೇ ಒಂದು ಖಾತಾ ಪ್ರಮಾಣ ಪತ್ರವನ್ನು ಸೃಜಿಸಲಾಗಿಲ್ಲ. | • ಇ-ಸ್ವತ್ತು 2.0 ತಂತ್ರಾಂಶವನ್ನು ಅನುಷ್ಠಾನಗೊಳಿಸಿದ ನಂತರ ಇಲ್ಲಿಯವರೆಗೆ 2268 ಅರ್ಜಿಗಳು ಸ್ವೀಕೃತವಾಗಿವೆ.<br>• ಇ-ಸ್ವತ್ತು 2.0 ತಂತ್ರಾಂಶದಲ್ಲಿ ಸಾರ್ವಜನಿಕರಿಂದ ಸ್ವೀಕರಿಸಲಾಗುವ ಅರ್ಜಿಗಳ ಅನುಮೋದನೆ ಪ್ರಕ್ರಿಯೆಯು 15 ದಿನಗಳೆಂದು ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ (ಗ್ರಾಮ ಪಂಚಾಯಿತಿಗಳ ತೆರಿಗೆ, ದರ ಮತ್ತು ಶುಲ್ಕಗಳು) ನಿಯಮಗಳು, 2025 ರಲ್ಲಿ ತಿಳಿಸಲಾಗಿರುತ್ತದೆ.<br>• ಅದರಂತೆ, ಅರ್ಜಿಗಳ ಅನುಮೋದನೆಯು ಕಾರ್ಯದರ್ಶಿ, ಪಂಚಾಯಿತಿ ಅಭಿವೃದ್ಧಿ ಅಧಿಕಾರಿ, ಅಧ್ಯಕ್ಷರು ಹಾಗೂ ಕಾರ್ಯನಿರ್ವಾಹಕ ಅಧಿಕಾರಿಗಳ ಹಂತಗಳನ್ನು ಒಳಗೊಂಡಿರುತ್ತದೆ.<br>• ಆದ್ದರಿಂದ, ಮೇಲ್ಕಂಡ ಅರ್ಜಿಗಳು ವಿವಿಧ ಹಂತಗಳಲ್ಲಿ ಇರುತ್ತವೆ. |
| 2 | ಈ ಹಿಂದಿನ ತಂತ್ರಾಂಶದಲ್ಲಿ ಕೇಂದ್ರ ಮತ್ತು ರಾಜ್ಯ ಸರ್ಕಾರದ ವಿವಿಧ ವಸತಿ ಯೋಜನೆಯಡಿ ಮನೆ ನಿರ್ಮಿಸಿದ ಫಲಾನುಭವಿಗಳಿಗೆ ಕದ ನಂಬ್ರ ವಿತರಿಸಲು ಅವಕಾಶವಿದ್ದು ಪ್ರಸ್ತುತ ತಂತ್ರಾಂಶದಲ್ಲಿ ಸದರಿ ಅವಕಾಶವನ್ನು ತೆಗೆದು ಹಾಕಲಾಗಿದೆ. | ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ (ಗ್ರಾಮ ಪಂಚಾಯಿತಿಗಳ ತೆರಿಗೆ, ದರ ಮತ್ತು ಶುಲ್ಕಗಳು) ನಿಯಮಗಳು, 2025 ರ ನಿಯಮ 5 ರಲ್ಲಿ ನೀಡಲಾಗಿರುವ ವರ್ಗೀಕರಣಗಳಲ್ಲಿ ಅನುಬಂಧ–1 ರಲ್ಲಿ ಕ್ರಮ ಸಂಖ್ಯೆ: 2 ರಲ್ಲಿ **'ಸರ್ಕಾರದ ವಸತಿ ನಿಗಮದ ಯೋಜನೆಯ ಮಂಜೂರಾದ ಆಸ್ತಿ'** ಎಂಬ ವರ್ಗೀಕರಣದಲ್ಲಿ ಅವಕಾಶವನ್ನು ಕಲ್ಪಿಸಲಾಗಿರುತ್ತದೆ. |
| 3 | ಈಗಾಗಲೇ ಸೃಜಿಸಲಾಗಿರುವ ನಮೂನೆ 11-Bಯನ್ನು 11-A ಗೆ ಪರಿವರ್ತಿಸಲು ಅವಕಾಶ ಇಲ್ಲವಾಗಿದೆ. | ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ (ಗ್ರಾಮ ಪಂಚಾಯಿತಿಗಳ ತೆರಿಗೆ, ದರ ಮತ್ತು ಶುಲ್ಕಗಳು) ನಿಯಮಗಳು, 2025 ರ ನಿಯಮ 5ರ ವರ್ಗೀಕರಣಗಳ ಅನುಗುಣವಾಗಿ ಸಂಬಂಧಿಸಿದ ದಾಖಲೆಗಳನ್ನು ಇ-ಸ್ವತ್ತು 2.0 ತಂತ್ರಾಂಶದಲ್ಲಿ ಇಂಧೀಕರಿಸುವ ಮೂಲಕ ನಮೂನೆ 11-B ಯನ್ನು 11-Aಗೆ ಪರಿವರ್ತಿಸಲು ಅವಕಾಶವನ್ನು ಕಲ್ಪಿಸಲಾಗುತ್ತದೆ. |

| | | |
|---|---|---|
| 4 | ಈ ಹಿಂದೆ ನಮೂನೆ 9 & 11-A ಇದ್ದು ಪ್ರಸ್ತುತ ಕೇವಲ 11-A ಖಾತಾ ಪತ್ರವನ್ನು ಸಾರ್ವಜನಿಕರಿಗೆ ವಿತರಿಸಲಾಗುತ್ತಿದ್ದು ನಮೂನೆ 9 ನ್ನು ಕೈಬಿಟ್ಟಿರುವ ಬಗ್ಗೆ ಸಾರ್ವಜನಿಕರಿಗೆ ಯಾವುದೇ ಮಾಹಿತಿಯನ್ನು ನೀಡಿರುವುದಿಲ್ಲ. | • ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ (ಗ್ರಾಮ ಪಂಚಾಯಿತಿಗಳ ಆಯವ್ಯಯ ಮತ್ತು ಲೆಕ್ಕಪತ್ರಗಳು) (ತಿದ್ದುಪಡಿ) ನಿಯಮಗಳು, 2025 ಕ್ಕೆ ದಿನಾಂಕ:13.11.2025 ರಂದು ತರಲಾದ ತಿದ್ದುಪಡಿಯಂತೆ ನಮೂನೆ 9 ಅನ್ನು ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ತೆರಿಗೆಗೆ ಒಳಪಡುವ ಆಸ್ತಿ ವಿವರಗಳ ಸಂಪೂರ್ಣ ವಿವರಗಳು, ತೆರಿಗೆ, ಉಪಕರ, ವಸೂಲಾತಿಯ ವಿವರಗಳು ಇತ್ಯಾದಿಗಳನ್ನು ನಿರ್ವಹಿಸಲು ಬಳಸುವ ಬಗ್ಗೆ ಅಧಿಸೂಚಿಸಲಾಗಿರುತ್ತದೆ.<br><br>• ಮೇಲಿನ ನಿಯಮಗಳನ್ವಯ ನಮೂನೆ – 9 ಆಸ್ತಿಯ ಸಂಪೂರ್ಣ ವಿವರಗಳಿದ್ದು ಸಾರ್ವಜನಿಕರಿಗೆ ವಿತರಣೆ ಮಾಡಲು ಅವಕಾಶಗಳು ಇರುವುದಿಲ್ಲ. ಆದರೆ, ಆಸ್ತಿಗೆ ಸಂಬಂಧಿಸಿದ ಎಲ್ಲಾ ವಿವರಗಳು ನಮೂನೆ-11A/11B ಗಳಲ್ಲಿ ಒಳಗೊಂಡಿರುವುದರಿಂದ ನಮೂನೆ – 11A/11B ಗಳನ್ನು ಮಾತ್ರ ಸಾರ್ವಜನಿಕರಿಗೆ ವಿತರಣೆ ಮಾಡಲಾಗುತ್ತದೆ.<br><br>• ನಮೂನೆಗಳ ಬಗ್ಗೆ ದಿನಾಂಕ:13.11.2025 ರಲ್ಲಿ ಅಧಿಸೂಚನೆ ಮೂಲಕ ಸಾರ್ವಜನಿಕರಿಗೆ ಮಾಹಿತಿಯನ್ನು ನೀಡಲಾಗಿರುತ್ತದೆ. |
| 5 | ಗ್ರಾಮ ಪಂಚಾಯಿತಿ ಅಧ್ಯಕ್ಷರಿಗೆ ಲಾಗಿನ್ ನೀಡಲಾಗಿದ್ದು, ಯಾವುದೇ ಸೂಕ್ತ ತರಬೇತಿ ನೀಡಿರುವುದಿಲ್ಲ. | ನಿಯಮಗಳು ಹಾಗೂ ಇ-ಸ್ವತ್ತು 2.0 ತಂತ್ರಾಂಶದ ಬಗ್ಗೆ ಗ್ರಾಮ ಪಂಚಾಯಿತಿ ಅಧ್ಯಕ್ಷರಿಗೆ ದಿನಾಂಕ: 15.11.2025ರಂದು ಸ್ಯಾಟ್ ಕಾಂ ಮೂಲಕ ತಾಲ್ಲೂಕು ಪಂಚಾಯಿತಿಗಳ ಸಾಮರ್ಥ್ಯ ಸೌಧದಲ್ಲಿ ಹಾಗೂ ದಿನಾಂಕ: 24.11.2025 ರಂದು ಮುಖಾಮುಖಿ ತರಬೇತಿಗಳನ್ನು ತಾಲ್ಲೂಕು ಪಂಚಾಯಿತಿಗಳಲ್ಲಿ ಆಯೋಜಿಸಲಾಗಿರುತ್ತದೆ. |
| 6 | ಈ ಹಿಂದೆ ಪಂಚಾಯಿ ಅಭಿವೃದ್ಧಿ ಅಧಿಕಾರಿ ಹಂತದಲ್ಲಿ ಅನುಮೋದನೆ ಆಗುತ್ತಿದ್ದ ಪ್ರಕ್ರಿಯೆಯನ್ನು ಈ ಹಿಂದೆ ಪಂಚಾಯತ್ ಅಭಿವೃದ್ಧಿ ಅಧಿಕಾರಿ ಹಂತದಲ್ಲಿ ಅನುಮೋದನೆ ಆಗುತ್ತಿದ್ದ ಪ್ರಕ್ರಿಯೆಯನ್ನು ಹೊಸ ತಂತ್ರಾಂಶದಲ್ಲಿ ತಾಲೂಕು ಪಂಚಾಯಿತಿಯ ಕಾರ್ಯನಿರ್ವಾಹಕ ಅಧಿಕಾರಿಯವರೆಗೆ ಕೊಂಡೊಯ್ಯಲಾಗಿದೆ. ಭಾರತದ ಸಂವಿಧಾನದ ಆಶಯದಂತೆ ಅಧಿಕಾರ ವಿಕೇಂದ್ರೀಕರಣದ ಭಾಗವಾಗಿ ರಚನೆಯಾದ ಗ್ರಾಮ ಪಂಚಾಯತಿಗಳು ಗ್ರಾಮೀಣ ಜನರಿಗೆ ಎಲ್ಲಾ ಸೇವೆಗಳನ್ನು ಒದಗಿಸುವ ಮುಂಚೂಣಿ ಕಾರ್ಯಾಲಯವಾಗಿದೆ ಆದರೆ ಪ್ರಸ್ತುತ ಸರ್ಕಾರಗಳ ನೀತಿಗಳಿಂದಾಗಿ ಗ್ರಾಮೀಣ ಭಾಗದ | • ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ (ಗ್ರಾಮ ಪಂಚಾಯಿತಿಗಳ ತೆರಿಗೆ, ದರ ಮತ್ತು ಶುಲ್ಕಗಳು) ನಿಯಮಗಳು, 2025 ರಲ್ಲಿ ಅರ್ಜಿಗಳನ್ನು ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ಹಾಗೂ ಗ್ರಾಮ ಪಂಚಾಯಿತಿ ಅಧ್ಯಕ್ಷರು ಅನುಮೋದನೆ ಮಾಡಲು ಹಾಗೂ ಅರ್ಜಿಗಳ ಪರಿಶೀಲನೆಯನ್ನು ಮಾತ್ರ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ ನೀಡಲಾಗಿರುತ್ತದೆ.<br><br>• ಈ ನಿಯಮಗಳಲ್ಲಿ ಅರ್ಜಿಗಳ ಅನುಮೋದನೆಗೆ 15 ದಿನಗಳ ಕಾಲಾವಕಾಶವನ್ನು ನಿಗಧಿಪಡಿಸಲಾಗಿದ್ದು, ವಿವಿಧ ಹಂತಗಳಿಗೆ ಅವಧಿಯನ್ನು ನಿರ್ಧಿಷ್ಟ ಪಡಿಸಲಾಗಿರುತ್ತದೆ. |

| | | |
|---|---|---|
| | ಜನರು ತಮ್ಮ ಹಲವಾರು ಸೇವೆಗಳಿಗಾಗಿ ನಗರ, ತಾಲೂಕು ಮತ್ತು ಜಿಲ್ಲಾ ಕೇಂದ್ರಗಳಿಗೆ ಅಲೆಯಬೇಕಾದ ಪರಿಸ್ಥಿತಿ ನಿರ್ಮಾಣವಾಗಿದೆ. | • ನಿರ್ದಿಷ್ಟಪಡಿಸಲಾದ ಅವಧಿ ಮೀರಿದಲ್ಲಿ ಅರ್ಜಿಗಳು ಸ್ವಯಂಚಾಲಿತವಾಗಿ ಮುಂದಿನ ಹಂತಕ್ಕೆ ವರ್ಗಾವಣೆ ಆಗುತ್ತವೆ. ಒಟ್ಟಾರೆ 15 ದಿನಗಳಲ್ಲಿ ಅರ್ಜಿಗಳು ದಾಖಲೆಗಳನ್ವಯ ನಿಯಮಾನುಸಾರ ಅನುಮೋದನೆ ಆಗಲು ತಂತ್ರಾಂಶದಲ್ಲಿ ಅವಕಾಶವನ್ನು ಕಲ್ಪಿಸಲಾಗಿರುತ್ತದೆ.<br>• ಇದರಿಂದ ಸಾರ್ವಜನಿಕರು ತಾವಿರುವಲ್ಲಿಯೇ ಸೇವೆಗಳನ್ನು ಪಡೆಯಲು ನಿಯಮಗಳಲ್ಲಿ ಹಾಗೂ ಇ-ಸ್ವತ್ತು 2.0 ತಂತ್ರಾಂಶಗಳಲ್ಲಿ ಅವಕಾಶವನ್ನು ಕಲ್ಪಿಸಲಾಗಿರುತ್ತದೆ. |

**ಸಂಖ್ಯೆ:**RDPR 970 GPA 2025

**(ಪ್ರಿಯಾಂಕ್ ಖರ್ಗೆ)**
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ
ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಸಚಿವರು